KACN320019792011

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ರವರ ನ್ಯಾಯಾಲಯ,ಕೊಳ್ಳೇಗಾಲ**

**ದಿನಾಂಕಃ 16ನೇ ಫೆಬ್ರವರಿ 2026**

ಉಪಸ್ಥಿತರು
ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ.,ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಕೊಳ್ಳೇಗಾಲ
ಅಸಲು ದಾವಾ ಸಂಖ್ಯೆ.173/2011

ವಾದಿ : ವಿ. ಮಹೇಶ್

**(ಪ್ರತಿನಿಧಿಸುವವರುಃ ಶ್ರೀ.ಎಂ.ಆರ್.ಕೆ., ವಕೀಲರು)**

ವಿರುದ್ದ/-

ಪ್ರತಿವಾದಿಗಳು : ಸೈಯದ್ ಮಕ್ಬುಲ್

**(ಪ್ರತಿನಿಧಿಸುವವರುಃ ಶ್ರೀ.ಎಸ್.ಎನ್.ಆರ್., ವಕೀಲರು)**

**ಅರ್ಜಿ ಸಂಖ್ಯೆಃ 13/2024**

ಅರ್ಜಿದಾರರು : ವಿ. ಮಹೇಶ್

…….. ವಾದಿ

ವಿರುದ್ಧ

ಎದುರುದಾರರು : ಸೈಯದ್ ಮಕ್ಬುಲ್

……. ಪ್ರತಿವಾದಿ

| | | |
|---|---|---|
| i | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ VI ನಿಯಮ 17 ಸಹವಾಚಕ ಕಲಂ 151 |
| ii | ಅರ್ಜಿಯಲ್ಲಿ ಕೋರಿರುವ ಪರಿಹಾರ | ವಾದ ಪತ್ರದ ತಿದ್ದುಪಡಿ ಆದೇಶವನ್ನು ಕೋರಿ |
| iii | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | 27.08.2024 |
| iv | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ 13 |
| v | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | 18.09.2024 |
| vi | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | 16.02.2026 |

**ಅರ್ಜಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 13ರ ಮೇಲಿನ ಆದೇಶ**

ಅರ್ಜಿದಾರರು/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 13 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರಡಿಯಲ್ಲಿ ದಾಖಲು ಮಾಡಿದ್ದು, ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಪ್ರಸ್ತಾಪಿಸಲ್ಪಟ್ಟ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ಸೇರಿಸಲು ಅನುಮತಿ ಕೋರಿ ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿರುತ್ತಾರೆ.

2. ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಬಂದಿಸಿದಂತೆ ಕಾನೂನು ಬಾಹಿರವಾಗಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದನ್ನು ಪ್ರಶ್ನಿಸಿ ಹಕ್ಕು ಘೋಷಣೆ ಮತ್ತು ಆಜ್ಞಾಪಕ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ದಾಖಲು ಮಾಡಲಾಗಿರುತ್ತದೆ. ಸದರಿ ದಾವೆಯು ಪ್ರತಿವಾದಿಯ ಪಾಟಿ ಸವಾಲಿನ ಹಂತದಲ್ಲಿ ಇರುತ್ತದೆ. ಆ ಪ್ರಕಾರವಾಗಿ ಅಧಿವಿಚಾರಣೆ ಇನ್ನು ಮುಕ್ತಾಯಗೊಂಡಿರುವುದಿಲ್ಲ. ಈ ದಾವೆಯಲ್ಲಿ ಇತ್ತಿಚಿಗೆ ದಿನಾಂಕ 04.07.1986 ಕ್ರಯದ ಒಪ್ಪಂದದ ಕರಾರು ಲಭ್ಯವಾಗಿರುತ್ತದೆ. ಈ ದಾವೆಯಲ್ಲಿನ ಸರ್ವೆ ನಂ 319 ಸತ್ತೆಗಾಲ ಗ್ರಾಮದ ಗ್ರಾಮ ಠಾಣಾ ಪ್ಯಾಪ್ತಿಗೆ ಸೇರಿದ ಸ್ವತ್ತಾಗಿರುತ್ತದೆ. ದಿನಾಂಕ 1986 ನೇ ಕರಾರು ಅರ್ಜಿದಾರರ ತಂದೆ ಮತ್ತು ಮಾದೇಗೌಡರವರ

ನಡುವೆ ಆದ ಕರಾರು ಆಗಿರುತ್ತದೆ. ಈ ಹಿಂದೆ ಸದರಿ ದಾಖಲಾತಿಯು ಲಭ್ಯವಿರಲಿಲ್ಲ. ಅಲ್ಲದೇ, ಇತರ ವಕೀಲರ ಮೂಲಕ ಇನ್ನಿತರ ಬೇರೆ ಪ್ರಕರಣಗಳನ್ನು ದಾಖಲು ಮಾಡಿರುವ ಕಾರಣ ಸದರಿ ದಾಖಲಾತಿಯು ಬೇರೆ ಕಡತಗಳಲ್ಲಿ ಬೆರೆತು ಹೋಗಿತ್ತು. ಆದ್ದರಿಂದ ಸದರಿ ದಾಖಲಾತಿಯ ಬಗ್ಗೆ ವಾದಪತ್ರದಲ್ಲಿ ಉಲ್ಲೇಖಿಸಲು ಸಾಧ್ಯವಾಗಿರುವುದಿಲ್ಲ. ದಾವಾ ಅನುಸೂಚಿತ ಸ್ವತ್ತಿನಲ್ಲಿ ಕಾನೂನು ಬದ್ಧ ಸ್ವಾದಿನಾನುಭವದಲ್ಲಿ ಇರುವುದನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ ಸದರಿ ದಾಖಲಾತಿಯು ಅವಶ್ಯಕ ದಾಖಲಾತಿಯಾಗಿರುತ್ತದೆ. ಈ ದಾವೆಯಲ್ಲಿನ ವಿವಾದವನ್ನು ಸಂಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಿರ್ಣಯಿಸಲು ಅವಶ್ಯಕ ದಾಖಲಾತಿಯಾಗಿರುತ್ತದೆ.

ಮುಂದುವರೆದು, ಪ್ರತಿವಾದಿಯು ಸೆಟ್ ಬ್ಯಾಕ್ ನಿಯಮಗಳನ್ನು ಉಲ್ಲಂಘಿಸಿ ಮನೆಯನ್ನು ನಿರ್ಮಾಣ ಮಾಡಿರುತ್ತಾರೆ. ನ್ಯಾಯಾಲಯದ ತಡೆಯಾಜ್ಞೆಯನ್ನು ಉಲ್ಲಂಘಿಸಿ ಕಾಮಗಾರಿಯನ್ನು ಸಹ ಮುಂದುವರೆಸಿರುತ್ತಾರೆ. ಈ ಅರ್ಜಿಯಲ್ಲಿ ಕೋರಿಕೊಂಡಿರುವ ತಿದ್ದುಪಡಿಯನ್ನು ಮಾಡುವುದರಿಂದ ದಾವೆಯ ಸ್ವರೂಪ ಹಾಗೂ ವ್ಯಾಜ್ಯ ಕಾರಣ ಬದಲಾಗುವುದಿಲ್ಲ.ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿವಾದಿಗೆ ಯಾವುದೇ ತೊಂದರೆಯುಂಟಾಗುವುದಿಲ್ಲ. ಬದಲಾಗಿ, ಅವರಿಗೆ ಪ್ರತಿವಾದಪತ್ರವನ್ನು ಸಲ್ಲಿಸಿಕೊಳ್ಳುವ ಅವಕಾಶ ಇರುತ್ತದೆ. ಮುಂದುವರೆದು, ಸದರಿ ಕರಾರಿನ ಬಗ್ಗೆ ವಾದಿಯ ಪಾಟಿ ಸವಾಲು ಮುಕ್ತಾಯಗೊಂಡ ನಂತರ ದಿನಾಂಕ 28.02.2024 ರಂದು ಲಭ್ಯವಾದ ಕಾರಣ ಕಾಲ ವಿಳಂಬ ಮಾಡಿ ಅರ್ಜಿಯನ್ನು ದಾಖಲು ಮಾಡಿರುವುದಿಲ್ಲ. ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದ್ದೇ ಆದಲ್ಲಿ, ಅರ್ಜಿದಾರರಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೊಂಡಿರುತ್ತಾರೆ.

3. ಸದರಿ ಮೇಲ್ಕಂಡ ಅರ್ಜಿಗೆ ಪ್ರತಿವಾದಿಯು ತಮ್ಮ ತಕರಾರು ಸಲ್ಲಿಸಿ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ವಾಸ್ತವಿಕವಾಗಲೀ, ಕಾನೂತ್ಮಕವಾಗಲೀ ಊರ್ಜಿತವಾಗಿರುವುದಿಲ್ಲ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ದಿನಾಂಕ 04.07.1986 ರ ಕ್ರಯದ ಕರಾರು ಸೃಷ್ಟಿತ ದಾಖಲಾತಿಯಾಗಿರುತ್ತದೆ. ಸದರಿ ಕ್ರಯದ ಕರಾರಿನಂತೆ ವಾದಿಯ ತಂದೆ ವೀರಬಸಪ್ಪ ಮತ್ತು ಅವರ ನಂತರ ವಾದಿಯು ದಾವಾ ಅನುಸೂಚಿತ ಸ್ವತ್ತಿನ ಸ್ವಾದೀನಾನುಭದಲ್ಲಿ ಇರುವಾಗಿ ಸುಳ್ಳು ಸಂಗತಿಗಳನ್ನು ನಿರೂಪಿಸಿರುತ್ತಾರೆ. ಹಾಗೂ ಯಾವುದೇ ಅಡೆತಡೆ ಇಲ್ಲದೇ ಸ್ವತ್ತಿನಲ್ಲಿಲ್ ಸ್ವಾದೀನಾನುಭ ಇರುವಾಗಿಯೂ ಸಹ ಸುಳ್ಳು ಸಂಗತಿಗಳನ್ನು ನಿರೂಪಿಸಿರುತ್ತಾರೆ. ಕೇವಲ ನ್ಯಾಯಧಾನವನ್ನು ವಿಳಂಭ ಮಾಡುವ ಉದ್ದೇಶದಿಂದ ಅರ್ಜಿಯನ್ನು ದಾಖಲಿಸಿರುತ್ತಾರೆ. ದಾವಾ ಅನುಸೂಚಿತ ಸರ್ವೆ ನಂ 319 ಸ್ವತ್ತು ಸತ್ತೇಗಾಲದ ಕಾಲೆಯ ಭೂಮಿಯ ಒಂದು ಭಾಗವಾಗಿದ್ದು, ಸದರಿ ಸ್ವತ್ತು ಲೇಟ್ ಚೌಡೇಗೌಡರವರ ಮಗ ಮಾದೇಗೌಡರವರಿಗೆ ಸೇರಿದ ಸ್ವತ್ತಾಗಿರುತ್ತದೆ. ಪ್ರತಿವಾದಿಯು 2012 ನೇ ಸಾಲಿನಲ್ಲಿ ಪ್ರತಿವಾದಪತ್ರವನ್ನು ಸಲ್ಲಿಸಿದ್ದು, ಸುಮಾರು

12 ವರ್ಷಗಳ ನಂತರ ತಿದ್ದುಪಡಿ ಕೋರಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಈ ದಾವೆಯಲ್ಲಿ ಸದರಿ ಲೇಟ್ ಚೌಡೇಗೌಡರವರ ಮಗ ಮಾದೇಗೌಡ ಅಥವಾ ಅವರ ವಾರಸ್ಸುದಾರರನ್ನಾಗಲೀ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸೃಷ್ಟಿತ ದಾಖಲಾತಿಗಳ ಆಧಾರದ ಮೇರೆಗೆ ತಿದ್ದುಪಡಿಯನ್ನು ಕೋರಿಕೊಂಡಿರುವ ಕಾರಣ ಅರ್ಜಿಯನ್ನು ಪುರಸ್ಕರಿಸಲು ಅವಕಾಶ ಇರುವುದಿಲ್ಲ. ವಾದಿಯು ಸಲ್ಲಿಸಿರುವ ಅರ್ಜಿಯು ಕಾಲಪರಿಮಿತಿ ಅಧಿನಿಯಮದಡಿಯಲ್ಲಿ ಬಾದಕವಾಗಿರುತ್ತದೆ. ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕುಬಾಧ್ಯತೆ ಇಲ್ಲದೇ ಇರುವ ಕಾರಣ ಈ ಮೇಲ್ಕಂಡ ಅರ್ಜಿಯನ್ನು ಪುರಸ್ಕರಿಸಲು ಬರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಳ್ಳುತ್ತಾರೆ.

4. ಅರ್ಜಿದಾರರು ಸಲ್ಲಿಸಿರುವ ಅರ್ಜಿಯ ನ್ಯಾಯೋಚಿತ ವಿಲೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

> ಅಂಶ 1:- ಅರ್ಜಿದಾರರು/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 13 ರಲ್ಲಿ ಕೋರಿಕೊಂಡಿರುವ ತಿದ್ದುಪಡಿಯು ದಾವೆಯಲ್ಲಿನ ಸಂಗತಿಗಳನ್ನು ನಿರ್ಧರಿಸುವಲ್ಲಿ ಅಗತ್ಯವಾಗಿರುತ್ತದೆ ಎಂಬುದಾಗಿ ರುಜುವಾತು ಪಡಿಸಿರುವರೇ?
>
> ಅಂಶ 2:- ಯಾವ ಆದೇಶ?

5. ಉಭಯಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು. ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಗಳ ಅನ್ವಯ ಈ ಮೇಲ್ಕಂಡ ಸಂಗತಿಗಳಿಗೆ ಈ ಕೆಳಕಂಡರೆ ಉತ್ತರಿಸಲಾಗಿದೆ.

ಅಂಶ 1:- ಸಕರಾತ್ಮಕವಾಗಿ,

ಅಂಶ 2:- ಈ ಕೆಳಕಂಡ ಆದೇಶದಂತೆ,

**<u>ಕಾರಣಗಳು</u>**

6. ಅಂಶ 1:- ವಾದಿಯು ದಾವಾಸ್ತಿಗೆ ಸಂಭಂದಿಸಿದಂತೆ ಪ್ರತಿವಾದಿಗಳ ವಿರುದ್ದ ಹಕ್ಕು ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆ ಆದೇಶವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.ಸದರಿ ದಾವೆಯಲ್ಲಿ ಪ್ರತಿವಾದಿಯು ಪಾಟೀ ಸವಾಲಿನ ಹಂತದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ ವಾದಪತ್ರದಲ್ಲಿನ ಸಂಗತಿಗಳನ್ನು ತಿದ್ದುಪಡಿ ಮೂಲಕ ವಾದಪತ್ರಕ್ಕೆ ಸೇರ್ಪಡೇ ಮಾಡಲು ಅನುಮತಿ ಕೋರಿಕೊಂಡಿರುತ್ತಾರೆ.

ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಪ್ರತಿವಾದಿಯ ಪಾಟಿ ಸವಾಲಿನ ಹಂತರದಲ್ಲಿ ದಿನಾಂಕ 04.07.1986ರ ಕ್ರಯದ ಕರಾರನ್ನು ಲಭ್ಯವಾಗಿದ್ದು, ಆ ಬಗ್ಗೆ ವಾದಪತ್ರದಲ್ಲಿ ತಿದ್ದುಪಡಿ ಮಾಡುವುದು ಅವಶ್ಯಕವಾಗಿರುತ್ತದೆ ಎಂಬುದಾಗಿ ಸ್ವತ್ತಿನ ಮೂಲ ಹಾಗೂ ಸದರಿ ಸ್ವತ್ತು ತಮಗೆ ಲಭ್ಯವಾದ ಬಗ್ಗೆ ಸಂಗತಿಗಳನ್ನು ನಿರೂಪಿಸಿ ಸದರಿ ಸಂಗತಿಯನ್ನು ತಿದ್ದುಪಡಿ ಮಾಡಲು ಅನುಮತಿ ಕೋರಿಕೊಂಡಿರುತ್ತಾರೆ. ಪ್ರತಿವಾದಿಯು ತನ್ನ ತಕರಾರಿನಲ್ಲಿ ವಾದಿಯು ಸಲ್ಲಿಸಿರುವ ಅರ್ಜಿಯಲ್ಲಿ ನಿರೂಪಿಸಿರುವ ಸಂಗತಿಗಳನ್ನು ಸೃಷ್ಠಿತ ದಾಖಲಾತಿಗಳ ಆಧಾರ ಮೇರೆಗೆ ನಿರೂಪಿಸಿರುತ್ತಾರೆ. ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರ ಕೊರತೆ ಇರುತ್ತದೆ. ಹಾಗೂ ಅರ್ಜಿಯು ಕಾಲಪರಿಮಿತಿಯಿಂದ ಬಾಧಕವಾಗಿರುತ್ತದೆ. ಅರ್ಜಿದಾರರು ತಿದ್ದುಪಡಿ ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ನಿರೂಪಿಸಿರುವ ಸಂಗತಿ ದಾವೆಯನ್ನು ವಿಲೇಗೊಳಿಸುವಲ್ಲಿ ಅವಶ್ಯಕವಾಗಿರುವುದಿಲ್ಲ. ಹಾಗಾಗಿ ಸದರಿ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿಕೊಂಡಿರುತ್ತಾರೆ.

7. ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿಯಲ್ಲಿ ವಾದ ಮತ್ತು ಪ್ರತಿವಾದ ಪತ್ರಗಳನ್ನು ದಾವೆಯ ಯಾವುದೇ ಹಂತದಲ್ಲಿ ತಿದ್ದುಪಡಿ ಮಾಡಲು ಅವಕಾಶ ಕೊಡಬಹುದಾಗಿದ್ದು ಅಂತಹ ತಿದ್ದುಪಡಿಯು ದಾವೆಯಲ್ಲಿನ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸಲು ಅವಶ್ಯಕವಾಗಿರತಕ್ಕಥದ್ದಾಗಿರುತ್ತದೆ. ಮುಂದುವರೆದು ಅಂತಹ ತಿದ್ದುಪಡಿಯು ದಾವೆಯ ಸ್ವರೂಪವನ್ನು ಬದಲಾವಣೆ ಮಾಡಬಾರದು ಹಾಗೂ ಯಾವುದೇ ಹೊಸ ವಾದವನ್ನು ಎತ್ತುವಂತಿರಬಾರದು. ಆದರೆ ತಿದ್ದುಪಡಿಯು ದಾವೆಯಲ್ಲಿನ ಸಂಗತಿಗಳನ್ನು ಪರಿಣಾಮಕಾರಿಯಾಗಿ ವಿಲೇ ಮಾಡಲು ಅನುಕೂಲವಾಗುವಂತಿರಬೇಕು. ಅಂತಹ ಸಂದರ್ಭದಲ್ಲಿ ತಿದ್ದುಪಡಿಯನ್ನು ಮಾಡಲು ಅನುಮತಿಸಬಹುದಾಗಿರುತ್ತದೆ. ಅದರಂತೆ, ವಾದಿಯು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಅರ್ಜಿದಾರರು ದಾವಾ ಅನುಸೂಚಿತ ಸ್ವತ್ತಿನಲ್ಲಿ ಅಕ್ರಮವಾಗಿ ಮತ್ತು ಕಾನೂನುಬಾಹಿರವಾಗಿ 24 x 7ಗಳನ್ನು ನಿರ್ಮಾಣ ನೀರನ್ನು ಹೊರಗೆ ಬಿಡಲು ಮಾಡಿರುವ ಪೈಪ್ ಲೈನ್ ಗಳಿಗೆ ಸಂಭಂಧಿಸಿದಂತೆ ಹಕ್ಕು ಘೋಷಣೆ ಮತ್ತು ಆಜ್ಞಾಪಕ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ದಾಖಲು ಮಾಡಿರುತ್ತಾರೆ. ಸದರಿ ದಾವೆಯಲ್ಲಿ ದಾವಾ ಅನುಸೂಚಿತ ಸ್ವತ್ತಿನ ಮಾಲೀಕರು ಎಂಬುದಾಗಿ ಸಂಗತಿಗಳನ್ನು ನಿರೂಪಿಸಿರುತ್ತಾರೆ. ಸದರಿ ಸಂಗತಿಗಳನ್ನು ಮತಷ್ಟು ಸ್ಪಷ್ಟ ಪಡಿಸುವ ನಿಟ್ಟಿನಲ್ಲಿ ತಮ್ಮ ತಂದೆಯವರಿಗೆ ಆದ ಕ್ರಯದ ಒಪ್ಪಂದ ಕರಾರಿನ ಬಗ್ಗೆ ಸಂಗತಿಗಳನ್ನು ವಿವರವಾಗಿ ನಿರೂಪಿಸಿ ತಿದ್ದುಪಡಿ ಮಾಡಲು ಅನುಮತಿಯನ್ನು ಕೋರಿಕೊಂಡಿರುತ್ತಾರೆ. ಅದರಂತೆ, ಅರ್ಜಿದಾರರು ಅರ್ಜಿಯಲ್ಲಿ ನಿರೂಪಿಸಿರುವ ಸಂಗತಿಗಳು ದಾವೆಯ ಸ್ವರೂಪವನ್ನು ಬದಲಾವಣೆ ಮಾಡುವ ಯಾವುದೇ ಸಂಗತಿಗಳನ್ನು ಹೊಂದಿರುವುದಿಲ್ಲ. ಬದಲಾಗಿ, ವಾದಪತ್ರದಲ್ಲಿನ ಸಂಗತಿಗಳಿಗೆ ಮತ್ತಷ್ಟು ಸ್ಪಷ್ಟತೆಯನ್ನು ಒದಗಿಸುವಂತೆ ಇರುತ್ತದೆ. ಪ್ರತಿವಾದಿಯು ಸದರಿ ತಿದ್ದುಪಡಿಯಲ್ಲಿನ ಸಂಗತಿಗಳನ್ನು ಅಲ್ಲಗಳೆಯುತ್ತಾರೆ ಹೊರತು ಸದರಿ ಅರ್ಜಿಯನ್ನು ಯಾವ ಕಾರಣಕ್ಕಾಗಿ ಪುರಸ್ಕರಿಸ ಬಾರದು ಎಂಬ ಬಗ್ಗೆ ನ್ಯಾಯಾಲಯಕ್ಕೆ ತಿಳಿಸಿರುವುದಿಲ್ಲ. ಪ್ರತಿವಾದಿಯು ತನ್ನ ಹೆಚ್ಚುವರಿ

ಪ್ರತಿವಾದಪತ್ರವನ್ನು ಸಲ್ಲಿಸಿಕೊಂಡು ಹಾಗೂ ಪ್ರಾಸ-1 ರವರನ್ನು ಪಾಟಿ ಸವಾಲಿಗೆ ಒಳಪಡಿಸಿ ಸದರಿ ಸಂಗತಿಯನ್ನು ಅಲ್ಲಗಳೆಯುವ ಅವಕಾಶ ಇರುತ್ತದೆ.

8. ವಾದಿಯು ಮೇಲ್ಕಂಡ ಅರ್ಜಿಯನ್ನು ಡಿಡಬ್ಲ್ಯೂ -1 ರವರ ಪಾಟೀ ಸವಾಲಿನ ಹಂತದಲ್ಲಿ ದಾಖಲು ಮಾಡಿರುತ್ತಾರೆ. ಈ ಹಂತದಲ್ಲಿ ತಿದ್ದುಪಡಿಯನ್ನು ಅನುಮತಿಸಿದ್ದೇ ಆದಲ್ಲಿ ಯಾವುದೇ ರೀತಿಯಾದ ತೊಂದರೆ ಉಂಟಾಗುವುದಿಲ್ಲ. ಮುಂದುವರೆದು, ವಾದಿಯು ದಾಖಲಿಸಿರುವ ಅರ್ಜಿಯಲ್ಲಿನ ಸಂಗತಿಗಳನ್ನು ಪರಿಶೀಲಿಸಲಾಗಿ ವಾದಿಯ ವಿಚಾರಣೆಯ ನಂತರವೇ ತಿದ್ದುಪಡಿಯಲ್ಲಿನ ಸಂಗತಿಗಳು ತಿಳುವಳಿಕೆಗೆ ಬಂದಿರುವುದಾಗಿ ತಿಳಿಸಿದ್ದು, ಅದನ್ನು ಪ್ರತಿವಾದಿಯು ಅಲ್ಲಗಳೆಯುವುದಿಲ್ಲ. ಮುಂದುವರೆದು, ನ್ಯಾಯಾಲಯದ ಸಮಕ್ಷಮ ಇರುವ ದಾಖಲಾತಿಯನ್ನು ಪರಿಶೀಲಿಸಲಾಗಿ ವಾದಿಯು ದಾವಾ ಅನುಸೂಚಿತ ಸ್ವತ್ತಿಗೆ ಸಂಭಂದಿಸಿದಂತೆ ಹಕ್ಕು ಘೋಷಣೇ ಮತ್ತು ಆಜ್ಞಾಪಕ ನಿರ್ಭಂದಕಾಜ್ಞೇಯನ್ನು ಕೋರಿ ದಾವೆಯನ್ನು ದಾಖಲು ಮಾಡಿದ್ದು, ಸದರಿ ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯಂತೆ ದಾವಾ ಅನುಸೂಚಿತ ಸ್ವತ್ತು ಯಾವ ರೀತಿ ಹಕ್ಕು ಬಂದಿರುತ್ತದೆ ಎಂಬುದರ ಬಗ್ಗೆ ಸ್ಪಷ್ಟವಾಗಿ ಸಂಗತಿಗಳನ್ನು ವಿವರಿಸಿರುವುದು ಕಂಡು ಬರುತ್ತಿದೆ. ಒಂದು ವೇಳೆ ಸದರಿ ಅರ್ಜಿಯನ್ನು ಪುರಸ್ಕರಿಸಿದ್ದು, ಅರ್ಜಿದಾರರು ತಮ್ಮ ಅರ್ಜಿಯಲ್ಲಿ ತಿಳಿಸಿರುವ ಸಂಗತಿಯನ್ನು ತಿದ್ದುಪಡಿ ಮಾಡುವುದರಿಂದ ವಾದ ಪತ್ರದಲ್ಲಿ ವ್ಯಾಜ್ಯ ಕಾರಣ ಬದಲಾಗುವುದಿಲ್ಲ ಹಾಗೂ ದಾವೆಯ ಸ್ವರೂಪವು ಸಹ ಬದಲಾಗುವುದಿಲ್ಲ. ಅರ್ಜಿದಾರರು ಪ್ರಸ್ತಾಪಿಸಲ್ಪಟ್ಟ ತಿದ್ದುಪಡಿಯಂತೆ ನಿರೂಪಿಸಿರುವಂತೆ ಸ್ವತ್ತಿನ ಮಾಲೀಕತ್ವ ಮತ್ತು ಹಕ್ಕು ಹಾಗೂ ನಿರಂತರ ಸ್ವಾದೀನವನ್ನು ರುಜುವಾತುಪಡಿಸುವ ಭಾರ ವಾದಿಯ ಮೇಲಿರುತ್ತದೆ. ವಾದಿಯು ಸಲ್ಲಿಸಿರುವ ದಾವೆಯಲ್ಲಿ ವಾದಿಗೆ ಸ್ವತ್ತಿನ ಮಾಲೀಕತ್ವ ಮತ್ತು ಸ್ವಾದೀನಾನುಭವಕ್ಕೆ ಸಂಭಂದಿಸಿದ ಸಂಗತಿಗಳು ದಾವೆಯಲ್ಲಿನ ಸಂಗತಿಗಳನ್ನು ಪರಿಣಮಕಾರಿಯಾಗಿ ತೀರ್ಮಾನಿಸುವ ನಿಟ್ಟಿನಲ್ಲಿ ಅವಶ್ಯಕವಾಗಿರುತ್ತದೆ.

9. ಮುಂದುವರೆದು, ಯಾವುದೇ ಒಂದು ದಾವೆಯಲ್ಲಿ ಪ್ರಸ್ತಾಪಿಸಿರುವ ತಿದ್ದುಪಡಿಯನ್ನು ಅನುಮೋದನೆ ಮಾಡಲು ಸದರಿ ತಿದ್ದುಪಡಿಯು, 1) ದಾವೆ ವ್ಯಾಜ್ಯ ಕಾರಣವನ್ನು ಬದಲಾಯಿಸಿರುವುದಿಲ್ಲ. 2) ಸದರಿ ತಿದ್ದುಪಡಿಯನ್ನು ಮಾಡುವ ಕಾರಣ ವಾದಿ ದಾವಾದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. ಈ ದಾವೆಯಲ್ಲಿ ಪ್ರಸ್ತಾಪಿಸಲಾದ ತಿದ್ದುಪಡಿಯನ್ನು ಸೇರ್ಪಡೆ ಮಾಡುವುದರಿಂದ ವ್ಯಾಜ್ಯಾಕಾರಣವಾಗಲೀ, ದಾವೆಯ ಸ್ವರೂಪವಾಗಲಿ ಬದಲಾವಣೆಯಾಗುವುದಿಲ್ಲ. ರಾಜೇಶ್ ಕುಮಾರ್ ಮತ್ತು ಇನ್ನೊಬ್ಬರು ಕೆ.ಕೆ.ಮೋದಿ, ಎ.ಐ.ಆರ್ 2006 ಸಂಖ್ಯೆ 1647 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಅನುಮೊದಿಸುವುದರಿಂದ ದಾವೆಯ ಸ್ವರೂಪ ಮತ್ತು ವ್ಯಾಜ್ಯ ಕಾರಣಕ್ಕಾಗಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ನಂಬುವುದಾದರೆ ಅಂತಹ ಸಂದರ್ಭದಲ್ಲಿ ತಿದ್ದುಪಡಿಯನ್ನು ಅನುಮೋದಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ. ಸದರಿ

ಪ್ರಕರಣದಲ್ಲಿನ ಅಂಶಗಳನ್ನು ಎತ್ತಿಹಿಡಿಯುತ್ತಾ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಜೆ.ಬಿ.ಎಲ್.ಫೆರೋರ್ ಮತ್ತು ಇನ್ನೊಬ್ಬರು ವಿರುದ್ಧ ಥೆರೋಸಾ ಫೆರೋರ್ (2004)(4) ಕೆಸಿಸಿಆರ್ 2249 ಪ್ರಕರಣದ ಫ್ಯಾರಾ ಸಂಖ್ಯೆ 13 ಮತ್ತು 14ರಲ್ಲಿ ಸರ್ವೋಚ್ಛ ನ್ಯಾಯಾಲಯವು ಮೇಲ್ಕಂಡ ಪ್ರಕರಣದಲ್ಲಿ ವಿವರಿಸಿದ ಅಂಶಗಳನ್ನು ಎತ್ತಿ ಹಿಡಿಯುತ್ತಾ, ತಿದ್ದುಪಡಿಯಲ್ಲಿ ಪ್ರಸ್ತಾಪಿಸಿದ ಅಂಶ ದಾವೆಯ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತಹ ಸಂದರ್ಭದಲ್ಲಿ ಅನುಮೋದಿಸಬಹುದೆಂದು ತಿಳಿಸಿರುತ್ತಾರೆ. ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಲಾಗಿ ವಾದಿ ಪ್ರಸ್ತಾಪಿಸಿರುವ ತಿದ್ದುಪಡಿಯು ದಾವೆಯ ಮೂಲ ಸ್ವರೂಪಕ್ಕೆ ಮತ್ತು ವ್ಯಾಜ್ಯ ಕಾರಣವಾಗಲಿ ಬದಲಾವಣೆ ಆಗದೇ ಇರುವುದರಿಂದ ಪ್ರತಿವಾದಿಯು ತಿಳಿಸಿರುವ ತಿದ್ದುಪಡಿಯನ್ನು ಅನುಮೋದಿಸಬಹುದೆಂದು ನ್ಯಾಯಾಲಯಕ್ಕೆ ಕಂಡುಬಂದಿರುತ್ತದೆ. ಈ ಹಂತದಲ್ಲಿ ಪ್ರತಿವಾದಿಯ ಅರ್ಜಿಯನ್ನು ಪುರಸ್ಕರಿಸುವುದು ದಾವೆಯನ್ನು ಪರಿಣಾಮಕಾರಿಯಾಗಿ ವಿಲೇ ಮಾಡುವ ನಿಟ್ಟಿನಲ್ಲಿ ಅವಶ್ಯಕವೆಂದು ಕಂಡಬಂದಿರುತ್ತದೆ. ಆದ್ದರಿಂದ ಅಂಶ-1ನ್ನು ಸಕರಾತ್ಮಕವಾಗಿ ಉತ್ತರಿಸಲಾಯಿತು.

**<u>10. ಅಂಶ 2 :-</u>** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ,

**<u>ಆದೇಶ</u>**

ಅರ್ಜಿದಾರರು/ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 13 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151ರಡಿಯಲ್ಲಿ ಅರ್ಜಿಯನ್ನು ರೂ. 750/-ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶವಾದ 14 ದಿನಗಳ ಒಳಗಾಗಿ ವಾದಿ ತನ್ನ ವಾದ ಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು.

(ಈ ಆದೇಶವನ್ನು ಶೀಘ್ರಲಿಪಿಗಾರಗಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 16.02.2026 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಕೊಳ್ಳೇಗಾಲ.

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಘೋಷಿಸಲಾಯಿತು)**

**ಆದೇಶ**

ಅರ್ಜಿದಾರರು/ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 13 ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151ರಡಿಯಲ್ಲಿ ಅರ್ಜಿಯನ್ನು ರೂ. 750/-ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶವಾದ 14 ದಿನಗಳ ಒಳಗಾಗಿ ವಾದಿ ತನ್ನ ವಾದ ಪತ್ರವನ್ನು ತಿದ್ದುಪಡಿ ಮಾಡತಕ್ಕದ್ದು.

ತಿದ್ದುಪಡಿ ಮತ್ತು ತಿದ್ದುಪಡಿ ವಾದ ಪತ್ರವನ್ನು ಕೊಡಲು ತೆರೆದ ನ್ಯಾಯಾಲಯದಲ್ಲಿ ಕರೆಯುವ ದಿನಾಂಕಃ 25.02.2026

**(ಕಾವ್ಯಶ್ರೀ ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ.